aglasem.com

FOR KARNATAKA CLASS 11 PREPARATION

Karnataka 1st PUC Model Question Paper 2027 for History (Paper 2, Kannada Medium)

EXAM	YEAR	TYPE	SUBJECT
Karnataka Class 11	2027	Sample Paper	History

ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)

ಪ್ರಥಮ ಪಿ.ಯು.ಸಿ. ಮಾದರಿ ಪ್ರಶ್ನೆ ಪತ್ರಿಕೆ-2, 2026-27

ವಿಷಯ: ಜಾಗತಿಕ ಇತಿಹಾಸ (21)

ಸಮಯ: 3-00 ಗಂಟೆಗಳು **ಒಟ್ಟು ಪ್ರಶ್ನೆಗಳು: 39** **ಗರಿಷ್ಠ ಅಂಕಗಳು: 80**

ಸೂಚನೆಗಳು: 1) ಪ್ರಶ್ನೆಗಳ ಕ್ರಮಸಂಖ್ಯೆಯನ್ನು ಸರಿಯಾಗಿ ನಮೂದಿಸುವುದು.

2) ಪ್ರಶ್ನೆಯ ಸೂಚನೆಗಳಿಗನ್ವಯವಾಗಿ ಉತ್ತರಿಸುವುದು.

3) ಭಾಗ-ಎ ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

4) ದೃಷ್ಟಿ ವಿಕಲ ಚೇತನ ವಿದ್ಯಾರ್ಥಿಗಳು ಭೂಪಟದ ಪ್ರಶ್ನೆ ಸಂಖ್ಯೆ 39 'ಎ' ಬದಲಿಗೆ ಪ್ರಶ್ನೆ ಸಂಖ್ಯೆ 39 'ಬಿ' ಯನ್ನು ಉತ್ತರಿಸುವುದು.

ಭಾಗ-ಎ

I. ಕೊಟ್ಟಿರುವ ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ: **5X1= 5**

1. ಹಿಸ್ಟೋರಿಯ ಪದದ ಅರ್ಥ

ಎ) ವಿಚಾರಣೆ ಅಥವಾ ತನಿಖೆ
ಬಿ) ಸಂಘರ್ಷ ಅಥವಾ ಹೋರಾಟ
ಸಿ) ನಾಗರಿಕತೆ ಅಥವಾ ಸಂಸ್ಕೃತಿ
ಡಿ) ಸ್ಮೃತಿ ಅಥವಾ ಸತ್ಯಾನ್ವೇಷಣೆ

2. ಎ. ಪ್ರತಿಪಾದನೆ:

ಕ್ರೈಸ್ತಧರ್ಮವನ್ನು ಪ್ರಪಂಚದ ಧರ್ಮ ಎಂದು ಕರೆಯಲಾಗಿದೆ.

ಆರ್. ಕಾರಣ:

ವಿಶ್ವದ ಒಟ್ಟು ಜನಸಂಖ್ಯೆಯಲ್ಲಿ 33% ರಷ್ಟು ಅನುಯಾಯಿಗಳನ್ನು ಈ ಧರ್ಮ ಹೊಂದಿದೆ.

ಎ) ಎ ಸರಿಯಾಗಿದೆ, ಆರ್ ತಪ್ಪಾಗಿದೆ
ಬಿ) ಎ ತಪ್ಪಾಗಿದೆ, ಆರ್ ಸರಿಯಾಗಿದೆ
ಸಿ) ಎ ಮತ್ತು ಆರ್ ಗಳೆರಡೂ ಸರಿಯಾಗಿದೆ, ಹಾಗೂ ಆರ್ ಯು ಎ ನ ಸರಿಯಾದ ವಿವರಣೆಯಾಗಿದೆ.
ಡಿ) ಎ ಮತ್ತು ಆರ್ ಗಳೆರಡೂ ಸರಿಯಾಗಿದೆ. ಅದರೆ ಆರ್, ಎ ನ ಸರಿಯಾದ ವಿವರಣೆಯಲ್ಲ.

3. ಸಪ್ತವಾರ್ಷಿಕ ಯುದ್ಧ ಇವರ ನಡುವೆ ನಡೆಯಿತು

ಎ) ಇಂಗ್ಲೆಂಡ್ ಮತ್ತು ಫ್ರಾನ್ಸ್
ಬಿ) ಇಂಗ್ಲೆಂಡ್ ಮತ್ತು ಅಮೇರಿಕ
ಸಿ) ಇಂಗ್ಲೆಂಡ್ ಮತ್ತು ಕೆನಡ
ಡಿ) ಇಂಗ್ಲೆಂಡ್ ಮತ್ತು ಸ್ಪೇನ್

4. ರಿಸಾರ್ಜಿಮೆಂಟೋ ಪತ್ರಿಕೆಯನ್ನು ಪ್ರಕಟಿಸಿದವರು

ಎ) ಗ್ಯಾರಿಬಾಲ್ಡಿ
ಬಿ) ಕೌಂಟ್-ಡಿ-ಕವೂರ್
ಸಿ) 2ನೇ ವಿಕ್ಟರ್ ಇಮ್ಯಾನುಯಲ್
ಡಿ) ಜೋಸೆಫ್ ಮ್ಯಾಜಿನಿ

5. ಅಲಿಪ್ತ ಎಂಬ ಪದವನ್ನು ಮೊದಲು ಬಳಸಿದವರು

ಎ) ಮಾರ್ಷಲ್ ಟಿಟೋ
ಬಿ) ಅಬ್ದುಲ್ ನಾಸೇರ್
ಸಿ) ಜವಾಹರಲಾಲ್ ನೆಹರು
ಡಿ) ವಿ ಕೆ ಕೃಷ್ಣ ಮೆನನ್

II. ಕೊಟ್ಟಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬಿಟ್ಟ ಸ್ಥಳಗಳನ್ನು ಭರ್ತಿಮಾಡಿ: **5X1= 5**

(ಮುಕ್ತನೀತಿ, ಪುನರ್‌ರಚನೆ, ಗೆಸ್ಟಪೋ, ಇಸ್ಲಾಂ, ಹಮ್ಮುರಾಬಿ, ಸಮಾಜವಾದ)

6. ಮೆಸೊಪೊಟೇಮಿಯನ್ನರ ಪ್ರಸಿದ್ಧ ಅರಸ _____

7. ಜಗತ್ತಿನ ಎರಡನೇ ಅತಿ ದೊಡ್ಡ ಧರ್ಮ _____

8. ಕೈಗಾರಿಕಾ ಕ್ರಾಂತಿಯಿಂದ ಹೊರಹೊಮ್ಮಿದ ಆರ್ಥಿಕ ಸಿದ್ಧಾಂತ _____

9. ಹಿಟ್ಲರ್‌ನು ಸ್ಥಾಪಿಸಿದ ಗುಪ್ತ ಪೋಲೀಸ್ ದಳ _____

10. ಗ್ಲಾಸ್‌ನಾಸ್ಟ್ ಎಂದರೆ _____

III. 11. ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ: **5X1= 5**

ಎ) ಲಾವೋತ್ಸೆ	-	i. ಗುರುತ್ವಾಕರ್ಷಣೆ ನಿಯಮ
ಬಿ) ಜೆಫರಿ ಛಾಸರ್	-	ii. ತಾವೋ ಸಿದ್ಧಾಂತ
ಸಿ) ಸರ್ ಐಸಾಕ್ ನ್ಯೂಟನ್	-	iii. ಕನ್‌ಫ್ಯೂಸಿಯನಿಸಂ
ಡಿ) ವಿನ್‌ಸ್ಟನ್ ಚರ್ಚಿಲ್	-	iv. ಕ್ಯಾಂಟರ್ ಬರಿ ಟೇಲ್ಸ್
ಇ) ಜೋಸೆಫ್ ಬ್ರಾಜ್ ಟಿಟೋ	-	v. ಇಂಗ್ಲೆಂಡ್‌ನ ಪ್ರಧಾನ ಮಂತ್ರಿ
	-	vi. ಯುಗೋಸ್ಲಾವಿಯದ ಅಧ್ಯಕ್ಷ

IV. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ: **5X1= 5**

12. 'ರೆಸ್ ಪಬ್ಲಿಕಾ' ಪದದ ಅರ್ಥವೇನು?
13. ಹಿಡುವಳಿದಾರ ಎಂದರೆ ಯಾರು?
14. ಕಾರ್ಬೊನರಿ ಎಂದರೇನು?
15. NATO ವಿಸ್ತರಿಸಿ.
16. ದೆಹಲಿಯಲ್ಲಿ ನಡೆದ ಅಲಿಪ್ತ ರಾಷ್ಟ್ರಗಳ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದವರು ಯಾರು?

ಭಾಗ-ಬಿ

V. ಕೆಳಗಿನ ಯಾವುದಾದರೂ ಎಂಟು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎರಡು ಪದ ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ: **8X2= 16**

17. ಇತಿಹಾಸದ ಯಾವುದಾದರೂ ಎರಡು ವ್ಯಾಖ್ಯೆಗಳನ್ನು ತಿಳಿಸಿ.
18. ಜವಾಹರಲಾಲ್ ನೆಹರು ರವರ ಎರಡು ಪ್ರಮುಖ ಕೃತಿಗಳು ಯಾವುವು?
19. ಭೂಮಿಯ ಉಗಮ ಮತ್ತು ವಿಕಸನದ ಯಾವುದಾದರೂ ಎರಡು ಸಿದ್ಧಾಂತಗಳನ್ನು ತಿಳಿಸಿ.
20. ಈಜಿಪ್ತನ್ನು 'ನೈಲ್ ನದಿಯ ವರಪ್ರಸಾದ' ಎಂದು ಏಕೆ ಕರೆಯಲಾಗಿದೆ?
21. ಮೆಸೊಪೊಟೇಮಿಯಾ ನಾಗರಿಕತೆ ಬೆಳೆವಣಿಯಾಗಲು ಕಾರಣವಾದ ಎರಡು ನದಿಗಳನ್ನು ತಿಳಿಸಿ.
22. ಪೆರಿಕ್ಲಿಸ್ ಕಾಲದ ಯಾರಾದರೂ ಇಬ್ಬರು ಶ್ರೇಷ್ಠ ನಾಟಕಕಾರರನ್ನು ಹೆಸರಿಸಿ.
23. ಯೇಸುವಿನ ಪುನರುತ್ಥಾನ ಎಂದರೇನು?
24. ಮಧ್ಯಕಾಲೀನ ಯೂರೋಪಿನಲ್ಲಿ ಅಸ್ತಿತ್ವಕ್ಕೆ ಬಂದ ಯಾವುದಾದರೂ ಎರಡು ವಿಶ್ವವಿದ್ಯಾಲಯಗಳನ್ನು ಹೆಸರಿಸಿ.
25. `ಇಟಲಿಯ ಏಕೀಕರಣದ ಖಡ್ಗ' ಎಂದು ಯಾರನ್ನು ಕರೆಯಲಾಗಿದೆ ಮತ್ತು ಅವನು ಸ್ಥಾಪಿಸಿದ ಸೈನ್ಯವನ್ನು ಹೆಸರಿಸಿ.
26. ಫ್ರಾಂಕ್‌ಫರ್ಟ್ ಸಂಸತ್ತಿನ ಪ್ರಸ್ತಾಪವನ್ನು 4ನೇ ಫ್ರೆಡ್ರಿಕ್ ವಿಲಿಯಂ ಏಕೆ ತಿರಸ್ಕರಿಸಿದನು?

27. ಭದ್ರತಾ ಮಂಡಳಿಯ ಯಾವುದಾದರೂ ಎರಡು ಖಾಯಂ ಸದಸ್ಯ ರಾಷ್ಟ್ರಗಳನ್ನು ಹೆಸರಿಸಿ.
28. ಶೀತಲ ಸಮರವನ್ನು ಅಂತ್ಯಗೊಳಿಸಿದ ಅಮೇರಿಕ ಮತ್ತು ರಷ್ಯಾದ ಅಧ್ಯಕ್ಷರು ಯಾರು?
29. ಮೂರನೇ ಬಣದ ಚಳುವಳಿ ಎಂದರೇನು?

ಭಾಗ-ಸಿ

VI. ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ 15 ರಿಂದ 20 ವಾಕ್ಯಗಳಲ್ಲಿ ಉತ್ತರಿಸಿ: **2X5= 10**

30. ಭೂಮಿಯ ಮೇಲ್ಮೈ ಹೇಗೆ ರಚನೆಯಾಯಿತು?
31. ಕನ್‌ಫ್ಯೂಸಿಯಸ್‌ನ ತತ್ವಶಾಸ್ತ್ರ ಕುರಿತು ಟಿಪ್ಪಣಿ ಬರೆಯಿರಿ.
32. ಜರ್ಮನಿಯ ಏಕೀಕರಣದಲ್ಲಿ ಬಿಸ್ಮಾರ್ಕ್‌ನ ಪಾತ್ರವನ್ನು ಚರ್ಚಿಸಿ.
33. ಸಿ ಐ ಎಸ್ ನ ಧ್ಯೇಯೋದ್ದೇಶಗಳನ್ನು ತಿಳಿಸಿ.

ಭಾಗ-ಡಿ

VII. ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ 30 ರಿಂದ 40 ವಾಕ್ಯಗಳಲ್ಲಿ ಉತ್ತರಿಸಿ: **2X10= 20**

34. ಗ್ರೀಕರ ಕೊಡುಗೆಗಳನ್ನು ಚರ್ಚಿಸಿ.
35. ಭೌಗೋಳಿಕ ಅನ್ವೇಷಣೆಯ ಕಾರಣಗಳು ಹಾಗೂ ಪರಿಣಾಮಗಳನ್ನು ವಿವರಿಸಿ.
36. ಅಮೇರಿಕ ಸ್ವಾತಂತ್ರ್ಯ ಸಂಗ್ರಾಮದ ಕಾರಣಗಳನ್ನು ವಿವರಿಸಿ.
37. ಮೊದಲ ಜಾಗತಿಕ ಯುದ್ಧದ ಕಾರಣಗಳನ್ನು ವಿವರಿಸಿ.

ಭಾಗ-ಇ

VIII. 38. ಕೆಳಗಿನ ಘಟನೆಗಳನ್ನು ಕಾಲಾನುಕ್ರಮದಲ್ಲಿ ಬರೆಯಿರಿ. **4X1= 4**

ಎ) ಟೆನ್ನಿಸ್ ಕೋರ್ಟ್ ಪ್ರತಿಜ್ಞೆ

ಬಿ) ಜೀವಿಯ ಉಗಮ

ಸಿ) ಬಾಂಡುಂಗ್ ಸಮ್ಮೇಳನ

ಡಿ) ಯೇಸುಕ್ರಿಸ್ತನನ್ನು ಶಿಲುಬೆಗೇರಿಸಿದ್ದು

IX. ಸೂಚನೆಗಳನ್ವಯ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ: **5+5= 10**

39. ಎ) ನಿಮಗೆ ಒದಗಿಸಿರುವ ಪ್ರಪಂಚ ಭೂಪಟದಲ್ಲಿ ಕೆಳಗಿನ ಐತಿಹಾಸಿಕ ಸ್ಥಳಗಳನ್ನು ಗುರುತಿಸಿ,
ಪ್ರತಿಯೊಂದು ಸ್ಥಳದ ಬಗ್ಗೆ ವಿವರಣೆ ಬರೆಯಿರಿ.

ಎ) ಅಥೆನ್ಸ್ ಬಿ) ಅಲೆಗ್ಸಾಂಡ್ರಿಯಾ ಸಿ) ಕಾನ್‌ಸ್ಟಾಂಟಿನೋಪಲ್ ಡಿ) ಪ್ಯಾರಿಸ್ ಇ) ಮಾಸ್ಕೊ

ಭಾಗ-ಎಫ್

ದೃಷ್ಠಿ ವಿಕಲಚೇತನ ವಿದ್ಯಾರ್ಥಿಗಳಿಗೆ ಮಾತ್ರ

39. ಬಿ) ಕೆಳಗಿನ ಪ್ರಶ್ನೆಗೆ 30 ರಿಂದ 40 ವಾಕ್ಯಗಳಲ್ಲಿ ಉತ್ತರಿಸಿ: **1X10= 10**

ನೆಪೋಲಿಯನ್ನನ ಏಳಿಗೆ ಹಾಗೂ ಸೈನಿಕ ದಿಗ್ವಿಜಯಗಳನ್ನು ಕುರಿತು ಬರೆಯಿರಿ.

*****